ದಿನಾಂಕಃ 07.09.2023 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೊಧಿಸಲಾಯಿತು.

ಪಾಟೀಸವಾಲುಃ ವಾದಿಯ ಪರ ವಕೀಲರಿಂದಃ

ನಾನು ಪಿ.ಯು.ಸಿ ವರೆಗೆ ವಿದ್ಯಾಭ್ಯಾಸ ಮಾಡಿದ್ದೇನೆ. ನನಗೆ ಕನ್ನಡ ಮತ್ತು ಇಂಗ್ಲೀಷ್ ಓದಲು ಬರೆಯಲು ಬರುತ್ತದೆ. ನನ್ನ ತಂದೆಗೆ 76 ವರ್ಷ ವಯಸ್ಸು ಆಗಿರುತ್ತದೆ. ನನ್ನ ತಂದೆಗೆ ಕಣ್ಣು ಕಾಣಿಸಿರುವುದಿಲ್ಲ, ಪಾರ್ಶ್ವವಾಯು ಆಗಿದ್ದು, ಹೊರಾಡಲು ಆಗುವುದಿಲ್ಲ. ದಾವಾ ಆಸ್ತಿಯನ್ನು ಖರೀದಿ ಮಾಡುವ ಕಾಲಕ್ಕೆ ಉಪನೊಂದನಾಧಿಕಾರಿಗಳ ಕಛೇರಿಯಿಂದ ರುಣಭಾರ ರಾಹಿತ್ಯ ಪ್ರಮಾಣಪತ್ರವನ್ನು ತೆಗೆದು ನೋಡಿದ್ದೇನೆ. ದಿಃ24.01.2018 ರಂದು ವಾದಿ ಸ್ವಾಧೀನ ರಹಿತ ಖರೀದಿ ಕರಾರುಪತ್ರವನ್ನು ದಾವಾ ಸ್ವತ್ತಿಗೆ ಸದಭಂದಿಸಿದ ಹಾಗೆ 1 ನೇ ಪ್ರತಿವಾದಿ ಬರೆದುಕೊಟ್ಟಿದ್ದಾರೆ ಎಂದರೆ ಸಾಕ್ಷಿ ನಮಗೆ ದಿಃ06.02.2018 ರಂದು ಖರೀದಿಗೆ ಕೊಟ್ಟಿದ್ದಾರೆ ಎನ್ನುತ್ತಾರೆ. ನಾನು ಖರೀದಿ ಮಾಡುವಾಗ ರುಣಭಾರ ರಾಹಿತ್ಯ ಪ್ರಮಾಣಪತ್ರವನ್ನು ತೆಗೆದು ನೋಡಿದ್ದು, ಅದರಲ್ಲಿ ವಾದಿಗೆ ಕರಾರು ಮಾಡಿಕೊಟ್ಟ ಬಗ್ಗೆ ನಮೂದು ಇರಲಿಲ್ಲ. ಯಾವುದೇ ಖರೀದಿ ಕರಾರು ಪತ್ರಗಳು ಮತ್ತು ಖರೀದಿ ಪತ್ರಗಳನ್ನು ನೊಂದಣಿ ಮಾಡುವಾಗ ಸಂಭಂದಪಟ್ಟ ಸಬ್ ರಿಜೀಸ್ಟ್ರಾರ್ ಕಚೇರಿಯಲ್ಲಿ ಅವುಗಳನ್ನು ಕಂಪ್ಯೂಟರ್‌ನಲ್ಲಿ ನಮೂದೂ ಮಾಡುತ್ತಾರೆ ಎಂದರೆ ಸರಿ.

2. ನಮ್ಮ ತಂದೆ ಮುರುಗೆಪ್ಪ ಮಲ್ಲಪ್ಪ ಹೊಸಮನಿರವರು ಶ್ರೀ ಜಗದ್ಗುರು ರೇಣುಕಾಚಾರ್ಯ ಮಹಿಳಾ ಪತ್ತಿನ ಸಹಕಾರಿ ಸೌಹಾರ್ದ ಸಂಘ ಗೋಕಾಕ್ ನಲ್ಲಿ ಅಧ್ಯಕ್ಷರರು ಆಗಿದ್ದರು ಎಂದರೆ ಸಾಕ್ಷಿ ಇಲ್ಲ ನನ್ನ ತಾಯಿರಾದ ವಿಜಯಲಕ್ಷ್ಮಿ ಮುರುಗೆಪ್ಪ ಹೊಸಮನಿರವರು ನಿರ್ದೇಶಕರಾಗಿದ್ದರು ಎನ್ನುತ್ತಾರೆ. 1 ನೇ ಪ್ರತಿವಾದಿಯವರು ಸದರಿ ಸಂಘದ ಕಾರ್ಯದರ್ಶಿಯಾಗಿದ್ದರು ಎಂದರೆ ಸರಿ. ಆ ಸಂಘದಲ್ಲಿ 6 ಕೋಟಿ ಹಣ ಅವ್ಯವಹಾರವಾಗಿದ್ದ ಬಗ್ಗೆ ನನಗೆ ಗೊತ್ತಿದೆ. ಸಂಘದ ಲೆಕ್ಕ ಪರಿಶೋಧನೆ ಆಗಿರುತ್ತದೆ. 5 ಕೋಟಿ 57 ಲಕ್ಷ 83 ಸಾವಿರ ಅವ್ಯವಹಾರ ಆಗಿದೆ ಎಂದು ಅರ್ಜಿ ಸಲ್ಲಿಸಿದ್ದಾರೆ ಎಂದರೆ ಸರಿ. 1 ನೇ ಪ್ರತಿವಾದಿಗೆ 13 ಲಕ್ಷ 25 ಸಾವಿರ ಹಣವನ್ನು ನಗಧು ರೂಪದಲ್ಲಿ ಕೊಟ್ಟಿದ್ದೇನೆ. ಸದರಿ ಹಣ 500 ರೂ ಮುಖಬೆಲೆಯದ್ದಾಗಿದ್ದವು. 500 ರೂ ಗಳ ಎಷ್ಟು

ನೋಟುಗಳು ಇದ್ದವು ಎಂದರೆ ಸಾಕ್ಷಿ ಎಲ್ಲಾ 500 ರೂ ಗಳದ್ದೆ ಇದ್ದವು ಎನ್ನುತ್ತಾರೆ. ಸದರಿ ಹಣವನ್ನು ಪಂಚಾಚಾರ್ಯ ಬ್ಯಾಂಕ್, ಗೋಕಾಕ್ ನಿಂದ ತಂದು ಕೊಟ್ಟಿರುತ್ತೇವೆ.

3. ಯಾವ ದಿನಾಂಕದಂದು ಹಣವನ್ನು ಬ್ಯಾಂಕ್‌ನಿಂದ ತೆಗೆಸಿದ್ದೀರಿ ಎಂದರೆ ಸಾಕ್ಷಿ ಅವಶ್ಯಕತರೆ ಬಿದ್ದಾಗ ಆಗಾಗ ತೆಗೆದುಕೊಟ್ಟಿದ್ದೇವೆ ಎನ್ನುತ್ತಾರೆ. ನಮ್ಮ ಮನೆಯಲ್ಲಿಯೇ ಹಣವನ್ನು ಕೊಟ್ಟಿದ್ದೇವೆ. ಹಣ ಕೊಡುವಾಗ 1 ನೇ ಪ್ರತಿವಾದಿ ಒಬ್ಬರೇ ಬಂದಿದ್ದರು. ಆಗ ಸಾಕ್ಷಿದಾರರು ಬಂದಿರಲಿಲ್ಲ. ಸಿ ಸಿ 343/2021 ನಮ್ಮ ತಾಯಿಯವರ ವಿರುದ್ಧ ಜೆ ಎಮ್ ಎಫ್ ಸಿ ಗೋಕಾಕ್ ನಲ್ಲಿ ದಾಖಲು ಆಗಿರುತ್ತದೆ. ಅದರಲ್ಲಿ ಒಟ್ಟು 11 ಜನ ಆರೋಪಿಗಳು ಇದ್ದಾರೆ. 1 ನೇ ಪ್ರತಿವಾದಿಯೂ ಸಹ ಆರೋಪಿಯಾಗಿದ್ದಾರೆ. ಶಾಂತಾ ದೇವಿರವರು 3 ನೇ ಆರೋಪಿಯಾಗಿದ್ದು, ನನಗೆ ಪರಡಿಯವಿದ್ದಾರೆ. ಜಯಶ್ರೀ ಪತ್ತಾರ 7 ನೇ ಆರೊಪಿ ಇದ್ದಾರೆ ಎಂದರೆ ಸರಿ. ಬೆಳಗಾವಿಯ ಜಿಲ್ಲಾ ಗ್ರಾಹಕರ ವೇದಿಕೆಯಲ್ಲಿ ನನ್ನ ತಾಯಿಯ ವಿರುದ್ಧ 35 ಪ್ರಕರಣಗಳು ದಾಖಲು ಆಗಿರುತ್ತವೆ. 1 ನೇ ಪ್ರತಿವಾದಿ ವಾದಿಗೆ ಖರೀದಿ ಕರಾರುಪತ್ರವನು ಮಾಡಿಕೊಟ್ಟಿದ್ದರೂ ಸಹ ನೀವು ಬಲವಂತವಾಗಿ 1 ನೇ ಪ್ರತಿವಾದಿಯಿಂದ ಖರೀದಿ ಪತ್ರ ಮಾಡಿಸಿಕೊಂಡಿದ್ದೀರಿ ಎಂದರೆ ಸಾಕ್ಷಿ ನಾನು ಬಲವಂತವಾಗಿ ಮಾಡಿಸಿಕೊಂಡಿಲ್ಲ ಎನ್ನುತ್ತಾರೆ. ದಾವಾ ಸ್ವತ್ತಿನ ಕಬ್ಜೆಯಲ್ಲಿ ನಾವೇ ಇದ್ದೇವೆ.

4. ನಮ್ಮ ಕ್ರಯಪತ್ರದ ಸಾಕ್ಷಿದಾರರಾದ ಮಹಾಲಿಂಗಪ್ಪ ಶಿವಲಿಂಗಪ್ಪ ನೇಗಿನಾಳ್ ರವರನ್ನು ಅವರ ಮನೆಗೆಹೋಗಿ ಕರೆದುಕೊಂಡು ಬಂದು ಸಹಿ ಮಾಡಿಸಿಕೊಂಡಿದ್ದೇವೆ ಎಂದರೆ ಸರಿಯಲ್ಲ, ಅವರೇ ಬಂದು ಮಾಡಿರುತ್ತಾರೆ. ಬಾಳಯ್ಯರವರು ಅವರೇ ಬಂದು ಸಾಕ್ಷ್ಯ ಮಾಡಿರುತ್ತಾರೆ. ಬಿ ಐ ಪತ್ತಾರ ಸಾಕ್ಷಿಯವರನ್ನು ನಾವೇ ಕರೆದುಕೊಂಡು ಬಂದು ಸಹಿ ಮಾಡಿಸಿಕೊಂಡಿದ್ದೇವೆ ಎಂದರೆ ಸರಿಯಲ್ಲ, ಅವರೇ ಬಂದಿರುತ್ತಾರೆ. ಸಾಕ್ಷಿ ಮುಂದುವರೆದು ನಾವು ಸಾಕ್ಷಿಗಳಾಗಿ ಸಹಿ ಮಾಡಲು ಅವರಿಗೆ ಹೇಳಿದೆವು, ನಂತರ

ಅವರೇ ಬಂದು ಸಹಿ ಮಾಡಿದರು ಎನ್ನುತ್ತಾರೆ. 1 ನೇ ಪ್ರತಿವಾದಿಗೆ ನನ್ನ ತಂದೆ 13 ಲಕ್ಷ 5 ಸಾವಿರ ಹಣ ಕೊಟ್ಟಿಲ್ಲ, ಅವರು ಕ್ರಯಪತ್ರವನ್ನು ಮಾಡಿಕೊಟ್ಟಿಲ್ಲ ಎಂದರೆ ಸರಿಯಲ್ಲ.

ಈ ಹಂತದಲ್ಲಿ ಮುಂದುವರೆದ ಪಾಟೀಸವಾಲಿಗೆ ಸಮಯ ಕೋರಿದ್ದು, ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದ ರೀತಿ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ.ಸರಿ ಇದೆ

(ಕೆ ಎಮ್ ಶಂಕರ್)
2 ನೇ ಹೆಚ್ಚುವರಿ ಹಿರಿಯ ದಿವಾಣಿ
ನ್ಯಾಯಾಧೀಶರು, ಗೋಕಾಕ

ಸಾಕ್ಷಿಯ ಸಹಿ